29760106194479

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು(ನಗರ ಯೋಜನೆ-ದ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/01/2018-19 2019-20 ದಿನಾಂಕ: 09-04-2019.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ 05, ಪಿಐಡಿ ಸಂಖ್ಯೆ 63-48-5, ನ್ಯೂ ಆಡುಗೋಡಿ ರಸ್ತೆ, ಲಕ್ಕಸಂದ್ರ, ದಕ್ಷಿಣ ವಲಯ, ವಾರ್ಡ್ ಸಂಖ್ಯೆ 146, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ R & D (110a & 112a) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: Ad.Com/SUT/ LP 0174/15-16 ದಿನಾಂಕ: 04-09-2018.
2) ಅರ್ಜಿದಾರರ ಮನವಿ ದಿನಾಂಕ: 31-01-2019.
3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 21-03-2019.

*****

ಖಾತಾ ಸಂಖ್ಯೆ 05, ಪಿಐಡಿ ಸಂಖ್ಯೆ 63-48-5, ನ್ಯೂ ಆಡುಗೋಡಿ ರಸ್ತೆ, ಲಕ್ಕಸಂದ್ರ, ದಕ್ಷಿಣ ವಲಯ, ವಾರ್ಡ್ ಸಂಖ್ಯೆ 146, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ನೆಲ+ಮೇಲಿನ 2 ಅಂತಸ್ತುಗಳ ಎರಡು R & D (110a & 112a) ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: Ad.Com/SUT/ LP 0174/15-16 ದಿನಾಂಕ: 04-09-2018 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಉಲ್ಲೇಖ (2) ರ ಮನವಿಗೆ ಸಂಬಂಧಿಸಿದಂತೆ, R & D (110a & 112a) ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 08-02-2019 ರಂದು ಸ್ಥಳ ಪರಿಶೀಲಿಸಲಾಗಿ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಸದರಿ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ನೀಡಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 7,33,000/- ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: RE-ifms624-TP/000001 ದಿನಾಂಕ: 09-04-2019 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಎರಡು R & D (110a & 112a) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ನಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಸಹಿ/-

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ
M/s. BOSCH Ltd.,
# 05, ಪಿಐಡಿ ಸಂಖ್ಯೆ 63-48-5,
ನ್ಯೂ ಆಡುಗೋಡಿ ರಸ್ತೆ, ಲಕ್ಕಸಂದ್ರ,
ದಕ್ಷಿಣ ವಲಯ, ವಾರ್ಡ್ ಸಂಖ್ಯೆ 146,
ಬೆಂಗಳೂರು.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ ಲೇಔಟ್) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

09/04/19

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4/6/19 9/4/19 9/4/19

Scanned by CamScanner